## ನನ್ನ ಕಥಾಪ್ರಸಂಗ

ನಾನು ವೈದ್ಯೆಯಾಗಬೇಕೆಂಬ ದೃಷ್ಟಿಯಿಂದ ಪಿಯುಸಿಯಲ್ಲಿ ವಿಜ್ಞಾನವನ್ನು ಐಚ್ಛಿಕ ವಿಷಯವಾಗಿ ಪಡೆದು, ನಂತರ ಸಫಲಳಾಗದೆ ವಿಜ್ಞಾನದಲ್ಲಿ ಪದವಿಯನ್ನು ಪಡೆದವಳು. ಹೀಗಾಗಿ ಸಾಹಿತ್ಯ ಕ್ಷೇತ್ರಕ್ಕೂ ನನಗೂ ದೂರದ ನಂಟು ಕೂಡ ಇರಲಿಲ್ಲ. ಆದರೆ ಬರವಣಿಗೆಯ ತುಡಿತ ಮತ್ತು ಸಾಹಿತ್ಯಿಕ ಸಂವೇದನೆಗಳು ನನ್ನಲ್ಲಿ ಸದಾ ಜಾಗೃತವಾಗಿದ್ದವು. ಅಭಿವ್ಯಕ್ತಿಯ ಅನೇಕ ತೊಡಕುಗಳಿಂದ ನಾನು ಗಲಿಬಿಲಿಗೊಂಡು, ಗಾಬರಿಯಾಗಿ, ಮೌನವಾಗಿದ್ದೆ. ಅಭಿವ್ಯಕ್ತಿಯ ಹೆದ್ದಾರಿ ಇರಲಿ, ಕಾಲುದಾರಿಯು ಕೂಡ ನನಗೆ ದಕ್ಕಲಿಲ್ಲ. ಬದಲಿಗೆ ನನ್ನ ದಾರಿಯನ್ನು ನಾನೇ ಸೃಷ್ಟಿ ಮಾಡಿಕೊಂಡು ನಾನೇ ಏಕಾಂಗಿಯಾಗಿ ನಡೆಯಬೇಕಾದ ಅನಿವಾರ್ಯತೆ ಮತ್ತು ಒತ್ತಡ ನನ್ನ ಸಾಹಿತ್ಯ ಕ್ಷೇತ್ರದ ಮೈಲಿಗಲ್ಲುಗಳಾದವು.

ವಿಮರ್ಶೆಯ ಬಗ್ಗೆ ಹೇಳುವುದಾದಲ್ಲಿ ನನ್ನ ಸಾಹಿತ್ಯದ ಬಗ್ಗೆ ಹೆಚ್ಚಿನ ವಿಮರ್ಶೆಗಳು ಬಂದಿಲ್ಲ. ಆದರೆ ಆರಂಭದಿಂದಲೂ ನನ್ನ ಕೃತಿಗಳ ಬಗ್ಗ ವಿಶೇಷ ಪ್ರೀತಿ ಮತ್ತು ಅಭಿಮಾನವನ್ನು ಹೊಂದಿರುವ ಜಿ.ಎಸ್. ಆಮೂರ, ಸಬೀಹಾ ಭೂಮಿಗೌಡ, ಎಂ.ಎಸ್. ಆಶಾದೇವಿ ಹಾಗೂ ಕೆ. ಷರೀಫಾ ಸಮಕಾಲೀನ ಸಂದರ್ಭದಲ್ಲಿ ನನ್ನ ಕೃತಿಗಳನ್ನು ಒರೆಗೆ ಹಚ್ಚಿದ್ದಾರೆ. ನಾನು ಕಾಣದ ಕೆಲವು ವಿಶಿಷ್ಟ ಆಯಾಮಗಳನ್ನು ಕೂಡ ತಮ್ಮ ಸೂಕ್ಷ್ಮ ದೃಷ್ಟಿಯಿಂದ ಅವಲೋಕಿಸಿ ದಾಖಲಿಸಿದ್ದಾರೆ. ಅನೇಕ ಸಂಶೋಧನ ವಿದ್ಯಾರ್ಥಿಗಳು ನನ್ನ ಕೃತಿಗಳನ್ನು ಪಿಎಚ್.ಡಿ. ಮತ್ತು ಎಂ.ಫಿಲ್‌ಗಾಗಿ ಆಯ್ಕೆ ಮಾಡಿಕೊಂಡಿದ್ದು ಸದರಿ ಪದವಿಗಳನ್ನು ಪಡೆದಿದ್ದಾರೆ. ಬರಹಗಾರ್ತಿಯಾಗಿ ಈ ಅಂಶಗಳು ನನಗೆ ನೆಮ್ಮದಿಯನ್ನು ಮತ್ತು ಆತ್ಮವಿಶ್ವಾಸವನ್ನು ನೀಡುವ ಸಂದರ್ಭಗಳಾಗಿದೆ.

ಸಾಮಾನ್ಯವಾಗಿ ನಾನು ಯಾವುದಾದರೂ ಕೃತಿಯನ್ನು ಓದುವಾಗ ಒಂದು ನೋಟ್‌ಬುಕ್ ನನ್ನ ಜೊತೆ ಇರುತ್ತದೆ. ಹಾಗೆ ಓದುತ್ತಿರುವಾಗ ಯಾವುದೋ ಒಂದು ನನ್ನ ಬದುಕಿನ ಅನುಭವವು ಚಕ್ಕೆಂದು ನನ್ನ ಮನೋಲೋಕದೆದುರು ಪ್ರತಿಷ್ಠಾಪನೆಕೊಂಡು ಅದರ ವಿಚಿತ್ರ ತಿರುವುಗಳ ಮೂಲಕ ಟೀವಿ ಪರದೆಯ ಮೇಲೆ ಮೂಡಿದಂತೆ ಇಡೀ ಕತೆಯೂ ಅದರ ಪಾತ್ರಗಳು, ಸಂಭಾಷಣೆ, ಅಂತ್ಯ, ಶೀರ್ಷಿಕೆಯ ಸಮೇತ ಮೂಡಲಾರಂಭಿಸುತ್ತದೆ. ಮತ್ತು ಆ ಇಡೀ ಘಟನಾವಳಿಗಳು ನನ್ನ ಮನಸ್ಸಿನಲ್ಲಿ ರೆಕಾರ್ಡ್ ಆಗಿಬಿಡುತ್ತದೆ. ಈ ರೀತಿಯ ಅನೇಕ ಸಂದರ್ಭಗಳು ಬಂದಿವೆ. ಅದನ್ನು ನಿರ್ದಿಷ್ಟವಾಗಿ ವೈಯುಕ್ತಿಕವಾಗಿ ವಿಶೇಷ ಸಂದರ್ಭವೆಂದು ಗುರುತಿಸುವ ಕ್ರಿಯೆಯು ಈಗ ನನ್ನಿಂದ ಸಾಧ್ಯವಿಲ್ಲ.

ಬರೆದ ನಂತರ ನಾನು ಕೂಡಲೇ ಪ್ರಕಟಣೆಗೆ ಕಳಿಸುವುದಿಲ್ಲ. ಹಾಗೆಯೇ ಕತೆಯು ಸಿದ್ಧವಾಗಿ ಒಂದು ಕಡೆ ನೆಮ್ಮದಿಯಾಗಿ ವಿಶ್ರಮಿಸುತ್ತಿರುತ್ತದೆ. ನನಗೆ ಬಹಳ ಸಂಕೋಚ ಸ್ವಭಾವ ಇರುವುದರಿಂದ ನಾನು ಕತೆಯನ್ನು ಬರೆದಿದ್ದೇನೆ, ಪ್ರಕಟಿಸುವಿರಾ ಎಂದು ಕೇಳುವುದು ನನಗೆ ಒಗ್ಗದ ವಿಷಯ. 'ನನ್ನ ಮಗಳನ್ನು ಮದುವೆ ಮಾಡಿಕೊಳ್ಳುವಿರಾ' ಎಂದು ಪ್ರಶ್ನಿಸುವ ಸಂದರ್ಭದಲ್ಲಿ ಉಂಟಾಗುವ ಲಜ್ಜೆ ಅಸಹಾಯಕತೆ, ಸಂದಿಗ್ಧತೆ ಹೀಗೆ ಏನೇನೋ ನನ್ನನ್ನು ಮುತ್ತಿಕೊಂಡಿರುತ್ತವೆ. ಹೀಗಾಗಿ ನನ್ನ ಕಥಾಸಂಕಲನಗಳ ಅನೇಕ ಕತೆಗಳು ಯಾವ ಪತ್ರಿಕೆಗಳಲ್ಲಿಯೂ ಪ್ರಕಟವಾಗಿಲ್ಲ. ಬದಲಿಗೆ ನೇರವಾಗಿ ಪುಸ್ತಕ ರೂಪದಲ್ಲಿ ಪ್ರಕಟವಾಗಿವೆ. ಪಿ. ಲಂಕೇಶ್ ಇದ್ದಾಗ ಮತ್ತು ಕೆಲವು ಪತ್ರಕರ್ತ ಮಿತ್ರರು ನನ್ನ ಕತೆಗಳ ಬಗ್ಗೆ ಒಲವನ್ನು ಹೊಂದಿರುವವರು ನನ್ನ ಬಳಿ ಒಂದು ಹೊಸ ಕತೆಯನ್ನು ಕಳಿಸುವಂತೆ ಕೇಳುತ್ತಾರೆ. ಯಾರಾದರೂ ಕಾಲಮಿತಿಯೊಳಗೆ ಕಳುಹಿಸಿ ಎಂದು ಕೇಳಿದ್ದಲ್ಲಿ ಅದು ನನಗೆ ಒಗ್ಗದ ವಿಷಯ. ನನಗೆ ಹಾಗೆ